<u>ದಿನಾಂಕಃ*06-11-2023* ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ಎದುರುದಾರ ಪರಃ ಶ್ರೀ ಡಿ.ಬಿ.ಎಸ್. ವಕೀಲರಿಂದಃ-</u>

ಅಸಲು ದಾವಾ ಸಂಖ್ಯೆಃ*65/2005* ಮತ್ತು ನನ್ನ ಪತ್ನಿ ದಾಖಲು ಮಾಡಿದ್ದ ಅಸಲು ದಾವಾ ಸಂಖ್ಯೆಃ*66/2005* ರ ದಾವೆ ದಿಃ*10.08.2015* ರಂದು ಡಿಕ್ರಿಯಾಗಿದ್ದು ಆ ಡಿಕ್ರಿಯಾದ ವಿಚಾರ ಅದೇ ದಿನ ನನ್ನ ಗಮನಕ್ಕೆ ಬಂದಿದೆ. ಆರ್.ಎ.*65/2015* ರ ಮೇಲ್ಮನವಿ ದಿಃ*05.11.2016* ರಂದು ಮುಗಿದಿದ್ದು ಆ ವಿಚಾರ ನನಗೆ ಅದೇ ದಿನ ಗಮನಕ್ಕೆ ಬಂದಿದೆ. ಅದೇ ರೀತಿ ನನ್ನ ಪತ್ನಿ ದಾಖಲು ಮಾಡಿದ ಮೇಲ್ಮನವಿ ಸಹ ಅದೇ ದಿನ ಮುಗಿದಿದ್ದು ಆ ವಿಚಾರವೂ ಸಹ ನನ್ನ ಗಮನಕ್ಕೆ ಬಂದಿದೆ. ಅಸಲು ದಾವಾ ಸಂಖ್ಯೆಃ*65/2005* ಮತ್ತು ಅಸಲು ದಾವಾ ಸಂಖ್ಯೆಃ*66/2005* ರ ದಾವೆಯಲ್ಲಿ ಆದ ತೀರ್ಪು ಮತ್ತು ಡಿಕ್ರಿಯನ್ನು ಜಾರಿಗೊಳಿಸಲು ಮೇಲ್ಮನವಿಯಲ್ಲಿ ಯಾವುದೇ ತಡೆಯಾಜ್ಞೆ ಇರಲಿಲ್ಲ ಎಂದರೆ ಸರಿ. ಅಸಲು ದಾವಾ ಸಂಖ್ಯೆಃ*65/2005* ಮತ್ತು ಅಸಲು ದಾವಾ ಸಂಖ್ಯೆಃ*66/2005* ರ ದಾವೆಯಲ್ಲಿ ಆದ ತೀರ್ಪಿನ ಆಧಾರದ ಮೇಲೆ ಎಫ್.ಡಿ.ಪಿ. ಸಲ್ಲಿಸಲು ಮತ್ತು  ಮಿನ್ಸ್ ಪ್ರಾಫೀಟ್ ಗೆ ಅರ್ಜಿ ಸಲ್ಲಿಸಲು ಯಾವುದೇ ಅಡ್ಡಿ ಇರಲಿಲ್ಲ ಎಂದರೆ ನನ್ನ ವಕೀಲರು ಸ್ವತ್ತಿನ ಸ್ವಾಧೀನ ಪಡೆದ ನಂತರ ಅರ್ಜಿ ಸಲ್ಲಿಸಬೇಕು ಎಂದು ಹೇಳಿದ್ದರು ಎನ್ನುತ್ತಾರೆ. ಈ ಅರ್ಜಿ ಕಾಲವಿಳಂಬದಿಂದ ಬಾದಿತವಾಗಿದೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಎದುರುದಾರನಿಂದ ನಷ್ಟಭರ್ತಿ ಪರಿಹಾರ ಕೇಳಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಎದುರುದಾರ ಮತ್ತು ಅವರ ತಂದೆ ನಡುವೆ ಬಹಳ ವರ್ಷಗಳಿಂದ ಸಂಬಂಧ ಚೆನ್ನಾಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಎದುರುದಾರ ತನ್ನ ತಂದೆ ಬಳಿ ಮಾತನಾಡುವುದಿಲ್ಲ ಮತ್ತು ಅವರ ತಂದೆ ಮನೆಗೆ

ಹೋಗುತ್ತಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಮತ್ತು ನನ್ನ ಪತ್ನಿ ಎದುರುದಾರನ ತಂದೆಯಿಂದ ಕ್ರಯಪತ್ರ ಬರೆಸಿಕೊಳ್ಳುವ ಪೂರ್ವದಿಂದಲೂ ಜೇಮ್ಸ್ ಎಂಬ ಹೆಸರಿನಲ್ಲಿ ಡಿಕ್ರಿ ಸ್ವತ್ತಿನಲ್ಲಿ ಗ್ಯಾರೇಜ್ ನಡೆಸುತ್ತಾ ಬಂದಿದ್ದರು ಎಂದರೆ ಸಾಕ್ಷಿ ನಾನು ಖರೀದಿ ಮಾಡಿದ ಕಾಲಕ್ಕೆ ಅವರ ತಂದೆ ನಡೆಸುತ್ತಿದ್ದರು ಆನಂತರ ಪ್ರತಿವಾದಿ ಸ್ವಾಧೀನ ವಹಿಸಿಕೊಡದೇ ಇದ್ದುದರಿಂದ ದಾವೆ ಹೂಡಿದೆವು ಎನ್ನುತ್ತಾರೆ. ಖರೀದಿ ಪೂರ್ವದಲ್ಲಿ ಎದುರುದಾರ ಸುಮಾರು *40* ವರ್ಷಗಳಿಂದ ಗ್ಯಾರೇಜ್ ನಡೆಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಗ್ಯಾರೇಜ್ ನ ಪರವಾನಗಿ ಎದುರುದಾರನ ಹೆಸರಿನಲ್ಲಿ ಇತ್ತು ಮತ್ತು ಅವರೇ ಗ್ಯಾರೇಜ್ ಅನ್ನು ನಡೆಸುತ್ತಿದ್ದರು ಎಂದರೆ ಸಾಕ್ಷಿ ಎಸ್.ಜೇಮ್ಸ್ ಏಸುದಾಸ್ ಈ ಹೆಸರಿನಲ್ಲಿ ಗ್ಯಾರೇಜ್ ನಡೆಯುತ್ತಿತ್ತು ಆದ್ದರಿಂದ ಎದುರುದಾರನ ತಂದೆ ಗ್ಯಾರೇಜ್ ನಡೆಸುತ್ತಿದ್ದರು ಎನ್ನುತ್ತಾರೆ. ವಾದ ಪತ್ರದಲ್ಲಿ ಎಲ್ಲಿಯೂ ಎದುರುದಾರನ ತಂದೆ ಗ್ಯಾರೇಜ್ ನಡೆಸುತ್ತಿದ್ದರು ಎಂದು ಪ್ರಸ್ತಾಪಿಸಿಲ್ಲ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ*65/2005* ಮತ್ತು ಅಸಲು ದಾವಾ ಸಂಖ್ಯೆಃ*66/2005* ರ ದಾವೆಗಳಲ್ಲಿ ಎದುರುದಾರನ ತಂದೆಯನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ಎದುರುದಾರನ ತಂದೆಯನ್ನು ಅಸಲು ದಾವಾ ಸಂಖ್ಯೆಃ*65/2005* ಮತ್ತು ಅಸಲು ದಾವಾ ಸಂಖ್ಯೆಃ*66/2005* ರ ದಾವೆಗಳಲ್ಲಿ ಸಾಕ್ಷಿದಾರನಾಗಿ ವಿಚಾರಣೆ ಮಾಡಿಲ್ಲ ಎಂದರೆ ಸರಿ. ಎದುರುದಾರನ ತಂದೆಯನ್ನು ಅಸಲು ದಾವಾ ಸಂಖ್ಯೆಃ*65/2005* ಮತ್ತು ಅಸಲು ದಾವಾ ಸಂಖ್ಯೆಃ*66/2005* ರ ದಾವೆಗಳಲ್ಲಿ ಪಕ್ಷಗಾರನಾಗಿ ಮಾಡಲು ಅಥವಾ ಸಾಕ್ಷಿದಾರನಾಗಿ ಮಾಡಲು ನಿಮಗೇನು ತೊಂದರೆ ಇತ್ತಾ ಎಂದರೆ ಸಾಕ್ಷಿ ನಮ್ಮ ವಕೀಲರು ಎಲ್ಲವನ್ನೂ ನೋಡಿಕೊಂಡಿರುತ್ತಾರೆ ಎನ್ನುತ್ತಾರೆ. ಖರೀದಿ ವ್ಯವಹಾರದಲ್ಲಿ ಆಗಲೀ, ಖರೀದಿ

ಮಾತುಕತೆಯಲ್ಲಿ ಆಗಲೀ ಎದುರುದಾರ ಭಾಗವಹಿಸಿರಲಿಲ್ಲ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ಆಸ್ತಿಗಳನ್ನು ಖರೀದಿ ಮಾಡುತ್ತಿದ್ದೇನೆ ಎಂದು ಗ್ಯಾರೇಜ್ ನಡೆಸುತ್ತಿದ್ದ ಪ್ರತಿವಾದಿಯನ್ನು ಯಾವತ್ತೂ ನಾನು ಕೇಳಿರಲಿಲ್ಲ ಎಂದರೆ ಸರಿ. ಆಸ್ತಿ ಖರೀದಿ ಮಾಡಿದ ತರುವಾಯ ಮತ್ತು ನನ್ನ ಮತ್ತು ನನ್ನ ಪತ್ನಿ ಹೆಸರಿಗೆ ಆಸ್ತಿ ಖಾತೆ ಬದಲಾವಣೆಯಾದ ನಂತರ ಆ ವಿಚಾರವನ್ನು ತಿಳಿಸಿ ಎದುರುದಾರನಿಗೆ ಆಸ್ತಿ ಸ್ವಾಧೀನವನ್ನು ಹಸ್ತಾಂತರ ಮಾಡಿಕೊಡಬೇಕು, ತಪ್ಪಿದರೆ ಖರ್ಚು-ವೆಚ್ಚಕ್ಕೆ ಕಾನೂನು ಕ್ರಮ ಕೈಗೊಳ್ಳುತ್ತೇನೆ ಎಂದು ತಿಳುವಳಿಕೆ ನೋಟೀಸ್ ಕಳುಹಿಸಿರುತ್ತೀರಾ ಎಂದರೆ ಸಾಕ್ಷಿ ಅದನ್ನೆಲ್ಲಾ ನನ್ನ ವಕೀಲರು ನೋಡಿಕೊಂಡಿರುತ್ತಾರೆ ಎನ್ನುತ್ತಾರೆ. ಎದುರುದಾರ ಗ್ಯಾರೇಜ್ ನಡೆಸುತ್ತಿದ್ದಾಗ ನಾನು ಮತ್ತು ನನ್ನ ಬೆಂಬಲಿಗರು ಅವರ ಸ್ವಾಧೀನಕ್ಕೆ ಹಸ್ತಕ್ಷೇಪ ಮಾಡಿದ್ದೇವೆ ಎಂದು ದೂರಿ ಪೊಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಮತ್ತು ನನ್ನ ಬೆಂಬಲಿಗರು ಆಗಾಗ ಎದುರುದಾರನ ಗ್ಯಾರೇಜ್ ಕೆಲಸಕ್ಕೆ ಹಸ್ತಕ್ಷೇಪ ಮಾಡುತ್ತಿದ್ದರಿಂದ ಯಾರೂ ಗ್ರಾಹಕರು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಬೆಂಬಲಿಗರು ಆಗಾಗ ಎದುರುದಾರನ ಗ್ಯಾರೇಜ್ ನಿರ್ವಹಣೆಗೆ ಅಡ್ಡಿಪಡಿಸಿದ್ದರಿಂದ ಮತ್ತು ತೊಂದರೆ ಕೊಟ್ಟಿದ್ದರಿಂದ ಎದುರುದಾರನ ಆರೋಗ್ಯದಲ್ಲಿ ಏರುಪೇರಾಯಿತು ಮತ್ತು ಶಸ್ತ್ರ ಚಿಕಿತ್ಸೆಯಾಗಿದೆ ಎಂದರೆ ಸರಿಯಲ್ಲ. ಆದ್ದರಿಂದ ಎದುರುದಾರನಿಗೆ *2005* ರಿಂದ ಗ್ಯಾರೇಜ್ ನಿರ್ವಹಣೆ ಮಾಡಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಗ್ಯಾರೇಜ್ ನಿರ್ಹವಣೆ ಮಾಡದೇ ಇದ್ದುದರಿಂದ ಎದುರುದಾರನಿಗೆ ಯಾವುದೇ ಉತ್ಪತ್ತಿ ಬಂದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಪತ್ನಿ ಖರೀದಿ ಮಾಡಿರುವ ಆಸ್ತಿ ಪೈಕಿ *20* x *15* ರ ಅಳತೆಯಲ್ಲಿ ಒಂದು ಮಂಗಳೂರು ಹಂಚಿನ ಶೆಡ್ ಇದೆ ಹಾಗೂ ಉಳಿದ ಆಸ್ತಿ ಖುಲ್ಲಾ ಇದೆ ಎಂದರೆ ಸರಿ.

ಮಂಗಳೂರು ಹಂಚಿನ ಚಾವಣಿ ಇರುವ ಭಾಗದಲ್ಲಿ ಸುತ್ತಾ ಗೊಡೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಒಂದು ಕಡೆ ರೋಲಿಂಗ್ ಶೆಟ್ಟರ್ ಇದ್ದು ಮಧ್ಯದಲ್ಲಿ ಪಿಲ್ಲರ್ ಇದೆ ಹಾಗೂ ಉಳಿದ ಭಾಗದಲ್ಲಿ ಗೋಡೆ ಇದೆ ಎನ್ನುತ್ತಾರೆ. ಸಾಕ್ಷಿಗೆ ಫೋಟೋ ತೋರಿಸಿ ಸದರಿ ಫೋಟೋ ನಾನು ಮತ್ತು ನನ್ನ ಪತ್ನಿ ಖರೀದಿ ಮಾಡಿರುವ ಆಸ್ತಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿ ಫೋಟೋವನ್ನು ನೋಡಿ ಒಪ್ಪಿರುತ್ತಾರೆ. ಸಾಕ್ಷಿಗೆ ತೋರಿಸಲಾದ ಫೋಟೋವನ್ನು ನಿಆರ್-*1* ಎಂದು ಗುರುತಿಸಲಾಯಿತು. ನಿಆರ್-*1* ರಲ್ಲಿ ಹಂಚಿನ ಚಾವಣಿ ಇರುವ ಜಾಗವನ್ನು ನಾನು ಖರೀದಿ ಮಾಡಿದ್ದೇನೆ ಮತ್ತು ಅದರ ಪಕ್ಕ ಇರುವ ಖಾಲಿ ಜಾಗವನ್ನು ನನ್ನ ಪತ್ನಿ ಖರೀದಿ  ಮಾಡಿದ್ದಾರೆ. ಮತ್ತೊಂದು ಫೋಟೋವನ್ನು ತೋರಿಸಿ ಸದರಿ ಫೋಟೋ ಸಹ  ನಾನು ಮತ್ತು ನನ್ನ ಪತ್ನಿ  ಖರೀದಿ ಮಾಡಿರುವ ಆಸ್ತಿಗೆ ಸಂಬಂಧಿಸಿದ ಫೋಟೋ ಎಂದರೆ ಸಾಕ್ಷಿ ಫೋಟೋವನ್ನು ನೋಡಿ ಒಪ್ಪಿದ್ದಾರೆ. ಸಾಕ್ಷಿಗೆ ತೋರಿಸಲಾದ ಫೋಟೋವನ್ನು ನಿಆರ್-*2* ಎಂದು ಗುರುತಿಸಲಾಯಿತು. ನಿಆರ್-*2* ನ್ನು ಆಸ್ತಿಯ ಮತ್ತೊಂದು ಭಾಗದಿಂದ ತೆಗೆಯಲಾಗಿದೆ ಎಂದರೆ ಸರಿ. ನಾನು ಮತ್ತು ನನ್ನ ಪತ್ನಿ ಆಸ್ತಿ ಖರೀದಿ ಮಾಡುವ ಮೊದಲು ಕಾನೂನು  ಸಲಹೆ ಪಡೆದಿರುವುದಿಲ್ಲ. ಆಸ್ತಿ ಖರೀದಿ ಮಾಡುವ ಪೂರ್ದಲ್ಲಿ ಆಸ್ತಿಗೆ ಸಂಬಂಧಿಸಿದ ಸುಮಾರು *20* ವರ್ಷದ ಖಾತೆಯನ್ನು ಪರಿಶೀಲನೆ ಮಾಡಿದ್ದೇನೆ. ಖಾತೆಯಲ್ಲಿ ಸದರಿ ಜಾಗದಲ್ಲಿ ಕ್ರಿಶ್ಚಿಯನ್ ಸಮುದಾಯಕ್ಕೆ ಸಂಬಂಧಿಸಿದ *3* ಸಮಾಧಿಗಳು ಇದೆ ಮತ್ತು ಸದರಿ ಸ್ವತ್ತು ನಗರಸಭೆಗೆ ಸೇರಿದ್ದು ಎಂದು ನಮೂದು ಇದೆ ಎಂದರೆ ಸರಿಯಲ್ಲ.  ನಾನು ಮತ್ತು ನನ್ನ ಪತ್ನಿ ಖರೀದಿ ಮಾಡಿರುತ್ತೇವೆ ಎಂದು ಹೇಳಲಾದ ಆಸ್ತಿಯಲ್ಲಿ *3* ಕ್ರಿಶ್ಚಿಯನ್ ಸಮುದಾಯದ ಸಮಾಧಿ ಕಲ್ಲುಗಳು ಇದೆ ಎಂದರೆ ಸರಿಯಲ್ಲ. ನಾನು ಸ್ವಾಧೀನ ವಹಿಸಿಕೊಂಡ ನಂತರ ಸದರಿ ಚಹರೆಗಳಿಗೆ ಹಾನಿ ಮಾಡಿದ್ದೇವೆ

ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಪತ್ನಿ ಖರೀದಿ ಮಾಡಿರುವ ಆಸ್ತಿಗಳ ತಿಂಗಳ ಗರಿಷ್ಟ ಬಾಡಿಗೆ *500* ರಿಂದ *600* ರೂಪಾಯಿ ಮಾತ್ರ ಎಂದರೆ ಸರಿಯಲ್ಲ. ನಾನು ಮತ್ತು ಪತ್ನಿ ಖರೀದಿ ಮಾಡಿದ್ದೇವೆ ಎಂದು ಹೇಳಲಾದ ಆಸ್ತಿ ಸ್ಮಶಾನದ ಜಾಗ ಆಗಿದ್ದರಿಂದ ಸದರಿ ಜಾಗಗಳಿಗೆ ಯಾರೂ ಬಾಡಿಗೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಪತ್ನಿ ಎದುರುದಾರನಿಂದ ಕೋರಿರುವ ಪರಿಹಾರ ನಿರಾಧಾರವಾಗಿದ್ದು ಮತ್ತು ಅವೈಜ್ಞಾನಿಕವಾದುದು ಹಾಗೂ ಅತೀ ದುಬಾರಿಯಾದುದು ಎಂದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಅವುಗಳನ್ನು ನ್ಯಾಯಾಲಯದ ಮುಂದೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಗರಸಭೆಗೆ ಸ್ವಯಂ ಘೋಷಣೆ ಆಧಾರದ ಮೇಲೆ ಕಂದಾಯ ಪಾವತಿ ಮಾಡಿದ್ದೇವೆ ಎಂದರೆ ಸರಿ. ಎದುರುದಾರನಿಂದ ಹೆಚ್ಚು ಹಣ ಪಡೆಯಬೇಕೆಂಬ ಉದ್ದೇಶದಿಂದ ನಾನೇ ಸ್ವಯಂ ಆಗಿ ಹೆಚ್ಚು ಕಂದಾಯ ಘೋಷಣೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಪತ್ನಿ ಖರೀದಿ ಮಾಡಿದ್ದೇವೆ ಎಂದು ಹೇಳಲಾದ ಆಸ್ತಿ ಕ್ರಿಶ್ಚಿಯನ್ ಸ್ವಶಾನವಾಗಿದ್ದರಿಂದ ಅಸಲು ದಾವಾ ಸಂಖ್ಯೆಃ*65/2005* ಮತ್ತು ಅಸಲು ದಾವಾ ಸಂಖ್ಯೆಃ*66/2005* ರ ದಾವೆಗಳಲ್ಲಿ ಎದುರುದಾರ ತಾನು ರಕ್ಷಣಾತ್ಮಕ ವಾದ ತೆಗೆದುಕೊಂಡಿದ್ದರೇ ಹೊರತು ನನಗೆ ತೊಂದರೆ ಕೊಡಲು ಯಾವುದೇ ವಾದ ಮಂಡನೆ ಮಾಡಿಲ್ಲ ಎದದರೆ ಸರಿಯಲ್ಲ. ನಾನು ಮತ್ತು ನನ್ನ ಪತ್ನಿ ಖರೀದಿ ಮಾಡಿರುವ ಖರೀದಿ ಪತ್ರಗಳು ಕಾನೂನಿನ ಅಡಿ ಊರ್ಜಿತವಲ್ಲದೇ ಇದ್ದುದರಿಂದ ಮತ್ತು ಮಾರಾಟ ಮಾಡಿದವರಿಗೆ ಮಾರಾಟ ಮಾಡುವ ಹಕ್ಕು ಇಲ್ಲದೇ ಇದ್ದುದರಿಂದ ಎದುರುದಾರ ನಾನು ಮತ್ತು ನನ್ನ ಪತ್ನಿ ಸಲ್ಲಿಸಿದ ದಾವೆಗಳಲ್ಲಿ ಆ ರೀತಿ ರಕ್ಷಣಾತ್ಮಕ ವಾದ ಮಂಡಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಪತ್ನಿ ಖರೀದಿ ಮಾಡಿದ್ದೇವೆ ಎಂದು ಹೇಳಲಾದ ಆಸ್ತಿಗಳಲ್ಲಿ

ಇದ್ದ ಕ್ರಿಶ್ಚಿಯನ್ ಸಮುದಾಯದ ಗೋರಿಗಳನ್ನು ತೆಗೆಯಲು ನಗರಸಭೆ ಮುಂದೆ ಯಾವುದೇ ಕಾನೂನು ರೀತಿ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸಾಕ್ಷಿ ಅಲ್ಲಿ ಯಾವುದೇ ಗೋರಿ ಇರಲಿಲ್ಲ ಆದ್ದರಿಂದ ಆ ರೀತಿ ಕ್ರಮ ಕೈಗೊಂಡಿಲ್ಲ ಎನ್ನುತ್ತಾರೆ. ಸದರಿ ಜಾಗದಲ್ಲಿ ಕ್ರಿಶ್ಚಿಯನ್ ಸಮುದಾಯದ ಗೋರಿ ಇದ್ದವು ಆದರೂ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಪತ್ನಿ ಖರೀದಿ ಮಾಡಿದ್ದೇವೆ ಎಂದು ಹೇಳಲಾದ ಜಾಗದ ಸಂಬಂಧ ಎದುರುದಾರ ಯಾವುದೇ ಪರಿಹಾರ ಕೊಡಲು ಭಾದ್ಯಸ್ಥನಲ್ಲ ಮತ್ತು ಅದನ್ನು ಸ್ವೀಕರಿಸಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ. ಪ್ರಾ.ಸಾ.2 ರವರು ನನ್ನ ಸ್ನೇಹಿತನಾದ್ದರಿಂದ ಸುಳ್ಳು ದಾಖಲಾತಿ ಸೃಷ್ಟಿ ಮಾಡಿ ಅವರ ಮುಖಾಂತರ ನ್ಯಾಯಾಲಯದ ಮುಂದೆ ಸಲ್ಲಿಸಿ ನನಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

*(ಸಾಕ್ಷಿಯ ಸಾಕ್ಷ್ಯವನ್ನ ಸಾಕ್ಷಿ ನುಡಿದಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)*

ಓಃಹೇಃಕೇಃಸಃಇಃಎಃಒಃ

ಸಹಿ/-
1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ.,ಚಿಕ್ಕಮಗಳೂರು.

ಎಸ್ಆರ್ಃ